## ಬುತ್ತಿ ಚಿಗುರು

### ಎಣ್ಣೆ ಹಾಕದೆ ಅಡುಗೆ

ರಮೇಶ ನಗರದ ಮುಖ್ಯ ರಸ್ತೆಯಲ್ಲಿ ಹೊಸದಾಗಿ ಹೋಟೆಲ್ ಹಾಕಿದ. 'ಇಲ್ಲಿ ಎಣ್ಣೆ ಹಾಕದೇ ಅಡುಗೆ ಮಾಡಲಾಗುತ್ತದೆ. ಧೈರ್ಯವಾಗಿ ಬನ್ನಿ, ಆರೋಗ್ಯಕರ ಆಹಾರವನ್ನು ತೃಪ್ತಿಯಾಗಿ ತಿಂದು ಹೋಗಿ' ಎಂದು ದೊಡ್ಡದಾಗಿ ಬೋರ್ಡ್ ಬರೆಸಿ ಹಾಕಿದ. ಮರುದಿನ ಉದ್ಘಾಟನೆ ಮುಗಿಯುತ್ತಿದ್ದಂತೆ ಜನರಾಶಿ ಬಂದು ಸೇರಿತು. ಎಣ್ಣೆ ಇಲ್ಲದೆ ಹೇಗೆ ಅಡುಗೆ ಸಿದ್ಧವಾಗುತ್ತದೆ ಎಂದು ನೋಡುವ ಕೌತಕ ಎಲ್ಲರಲ್ಲಿಯೂ ಮನೆ ಮಾಡಿತ್ತು. 'ದೇವರಾಣೆಗೂ ನಿಜ, ನೀವೇ ನೋಡಿ ಅಡುಗೆ ಮಾಡುವಾಗ ನಮ್ಮ ಶೆಫ್ ಯಾವತ್ತೂ ಎಣ್ಣೆ ಹಾಕೋದಿಲ್ಲ. ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ಮಾತ್ರ ಎಣ್ಣೆ ಹಾಕುತ್ತಾನೆ' ಎಂದ.

**ಅನುಪಮಾ ಎಸ್.ವಿ.**



---

### ಪ್ರಾಣ ಸ್ನೇಹಿತ...

ಪರಮೇಶಿ ಹೆಂಡತಿ ಪದ್ದಿಯ ಜೊತೆ ತುಂಬಾ ಹೊತ್ತಿನವರೆಗೂ ಮಾತಾಡದೆ ಕುಳಿತು ಬಿಟ್ಟಿದ್ದ.



ಕೊನೆಗೆ ಮೌನ ಮುರಿದ ಪದ್ದಿ, 'ಯಾಕೆ ಸುಮ್ಮನೇ ಕುಳಿತಿದ್ದೀರಿ, ಮಾತಾಡ್ತಾನೇ ಇಲ್ಲ?' ಎಂದಳು. ಅದನ್ನೇ ಕಾಯುತ್ತಿದ್ದ ಪರಮೇಶಿ, 'ನಿನ್ನೆಯ ದಿನ ನನ್ನ ಗೆಳೆಯ ತಿಮ್ಮ ನನಗೆ ಅಷ್ಟೆಲ್ಲಾ ಹೇಳುವಾಗ ನೀನು ಸುಮ್ಮನೇ ಇದ್ದೆ ಅಲ್ವಾ? ಅವಿವೇಕಿ ಅಂದ, ನಿಷ್ಪ್ರಯೋಜಕ, ಕೈಲಾಗದವನು ಎಂದೆಲ್ಲಾ ಬಯ್ಯುತ್ತಿರುವಾಗ ನೀನು ಏನೂ ಅನ್ನದೇ ಸುಮ್ಮನೇ ನಿಂತಿದ್ದೆ. ನನಗೆ ಅವನು ಬೈದಿದ್ದಕ್ಕಿಂತ ನೀನು ಸುಮ್ಮನಿದ್ದಿದ್ದೇ ಹೆಚ್ಚು ಬೇಜಾರಾಯ್ತು' ಎಂದ. 'ಹೌದು ರಿ, ನಿನ್ನೆಯಷ್ಟೇ ಅಲ್ಲ, ನನಗೆ ಈಗಲೂ ಆಶ್ಚರ್ಯವಾಗ್ತಿದೆ. ಅವನು ನಿಮ್ಮನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾನಲ್ಲ ಅಂತ... ಅವನಾಡಿದ ಒಂದೊಂದು ಮಾತೂ ನಿಮಗೇ ಹೇಳಿ ಮಾಡಿಸಿದಂತೆ ಇದ್ವು ಅಲ್ವಾ? ನಿಜವಾಗಿಯೂ ಅವನೇ ನಿಮ್ಮ ಪ್ರಾಣದ ಗೆಳೆಯ ಕಣ್ರೀ...' ಎಂದಳು.

**ಶಿವಲೀಲಾ ಸೊಪ್ಪಿಮಠ**